# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## **ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 24-03-2021 ಪ್ರಶ್ನೆ ಸಂಖ್ಯೆ : 1772 (2043)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)

ಉತ್ತರ ನೀಡಬೇಕಾದ ದಿನಾಂಕ : 24-03-2021

ಉತ್ತರಿಸುವ ಸಚಿವರು: ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರು

ವಿಷಯ : PRAMC ಯೋಜನೆ ಅಡಿಯಲ್ಲಿ ರೂಪಿಸಿರುವ ಕಾರ್ಯಕ್ರಮಗಳು

(ಅ) ರಾಜ್ಯದಲ್ಲಿ PRAMC ಯೋಜನೆ ಅಡಿಯಲ್ಲಿ ರೂಪಿಸಿರುವ ಕಾರ್ಯಕ್ರಮಗಳು ಯಾವುವು; ಮತ್ತು ಈ ಯೋಜನೆಗಳ ತಯಾರಿ ಅನುಷ್ಠಾನಗೊಳಿಸಲು ಸಂಸ್ಥೆಯಲ್ಲಿರುವ ಅಂಗಗಳು ಯಾವುವು; ಇವುಗಳ ಕಾರ್ಯ ನಿರ್ವಹಣೆ ಮತ್ತು ಆಚರಣೆ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು ;

(ಆ) ಈ ಸಂಸ್ಥೆಯಲ್ಲಿ ರಸ್ತೆ ಸುರಕ್ಷತೆ ಬಗ್ಗೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಯಾವುವು; ಈ ಕಾರ್ಯಕ್ರಮಗಳ ರೂಪುರೇಷೆ ಮತ್ತು ಅನುಷ್ಠಾನದ ವಿವರ ನೀಡುವುದು ;

(ಇ) ರಸ್ತೆ-ಸುರಕ್ಷತೆ ಅಡಿಯಲ್ಲಿ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳಲ್ಲಿರುವ ಕಿರಿದಾದ ಮತ್ತು ಹಳೆಯದಾದ ಸೇತುವೆಗಳ ಪುನಃಶ್ಚೇತನಗೊಳಿಸಲು ಗುರುತಿಸಲಾಗಿರುವ ಸೇತುವೆಗಳೆಷ್ಟು ಮತ್ತು ಈ ಸೇತುವೆಗಳ ಅಗಲೀಕರಣ ಯೋಜನೆಗಳ ಮತ್ತು ಪುನಃಶ್ಚೇತನಕ್ಕೆ ತಯಾರಿಸಿರುವ ಗುರಿ, ಸಾಧನೆಗಳೇನು ; (ವಿವರ ನೀಡುವುದು)

(ಈ) ರಾಜ್ಯದಲ್ಲಿ ಕಿರಿದಾದ ಮತ್ತು ಹಳೇ ಸೇತುವೆಗಳ ಮೇಲೆ ಭಾರೀ ಗಾತ್ರದ ಮತ್ತು ಬಹುಗಾಲಿಗಳ ವಾಹನಗಳು ಚಲಿಸುತ್ತಿರುವುದರಿಂದ ತೀವ್ರವಾದ ಅಪಘಾತಗಳು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಅಪಘಾತಗಳನ್ನು ನಿವಾರಿಸಲು ಇರುವ ವ್ಯವಸ್ಥೆ ಮತ್ತು ಈ ವ್ಯವಸ್ಥೆಯ ಕಾರ್ಯಾಚರಣೆಗಳು ಯಾವುವು ? (ಸಂಪೂರ್ಣ ಮಾಹಿತಿ ನೀಡುವುದು)